# ಹಿಡಿಯಲಾಗದ, ಪೊರೆಯಲಾಗದ ಹೆಣ್ಣ

ತ್ಯಾಗ, ಬಲಿದಾನ, ಮಮತೆಯ ಕಣ್ಣು– ಇವು ನಾವು ಬಾಲ್ಯದಿಂದಲೂ ಮತ್ತೆ ಮತ್ತೆ ಕೇಳಿಕೊಂಡು ಬಂದಿರುವ ಪದಗಳು. ಹೆಣ್ಣಿಗಾಗಿಯೇ ಹೆಚ್ಚು ಬಳಸಲಾದ ಪದಗಳು. ಇದರ ಜೊತೆ ಹೆಣ್ಣಿನೊಂದಿಗೆ ಸೇರಿ ಹೋಗಿರುವ ಪದಗಳೆಂದರೆ ಶೀಲ, ಪಾತಿವ್ರತ್ಯ. ಸಮಾಜ ಹೆಣ್ಣಿನಿಂದ ಬಹಳಷ್ಟು ಸಂಗತಿಗಳನ್ನು ನಿರೀಕ್ಷಿಸುತ್ತದೆ. ನಿರೀಕ್ಷೆಗೆ ತಕ್ಕ ಹಾಗೆ ಇರಬೇಕು ಎಂದು ಬಯಸುತ್ತದೆ. ತನಗೇನು ಬೇಕು ಎಂದು ಯೋಚಿಸುವಷ್ಟರಲ್ಲೇ ಹೆಣ್ಣಿನ ಬಹುತೇಕ ಬದುಕು ಮುಗಿದುಬಿಟ್ಟಿರುತ್ತದೆ. ಕೊನೆಗೆ ಸಾಂಪ್ರದಾಯಿಕ ಬದುಕು ಒಪ್ಪಿಕೊಂಡವರಿಗೆ ಸಾರ್ಥಕತೆ, ಭಿನ್ನವಾಗಿ ತನ್ನ ಅಸ್ತಿತ್ವದ ಬಗ್ಗೆ ಆಲೋಚಿಸುವವರಿಗೆ ಕೇವಲ ನಿರಾಶೆ ಮಾತ್ರ ಉಳಿದುಬಿಡುತ್ತದೆ.

ಗೋಪುರ, ಕೋಟೆ, ಕೆರೆ, ಕುಂಟೆಗಳೊಂದಿಗೆ ಹೆಣ್ಣಿನ ತ್ಯಾಗ ಮತ್ತು ಬಲಿದಾನದ ಕಥೆಗಳನ್ನು ನಮ್ಮ ಪರಂಪರೆಯಲ್ಲಿ ಹೆಣೆಯಲಾಗಿದೆ. ‘ಕೆರೆಗೆ ಹಾರ’ ಮತ್ತೆ ಮತ್ತೆ ನಾವು ಬಾಲ್ಯದಿಂದಲೂ ಕೇಳಿದ ಹೆಣ್ಣ ಮಾದರಿಯ ರೂಪದ ಕಥೆ. ಬಾಲ್ಯದಿಂದಲೂ ತವರಿನಲ್ಲಿ ಮಮತೆಯ ಬಳ್ಳಿಯಾದ ಹೆಣ್ಣು ಮಗಳ ಜೀವನ ಶಾಶ್ವತವಾಗಿ ಹಬ್ಬುವುದು ಗಂಡನ ಮನೆಯ ಮಾಡಿನ ಮೇಲೆ. ಕೆರೆಗೆ ಹಾರ ಒಂದಲ್ಲ ಒಂದು ಸಂದರ್ಭದಲ್ಲಿ ನಮ್ಮ ಮುಂದೆ ಬಿಚ್ಚಿಕೊಳ್ಳುವ ಕರುಳಬಳ್ಳಿಯ ಕಾವ್ಯ. ಕರುಳುಬಳ್ಳಿಯ ಕಾವ್ಯವೆಂದರೆ ಬಹಳಷ್ಟು ಹೆಣ್ಣುಮಕ್ಕಳು ಕುಟುಂಬ ವ್ಯವಸ್ಥೆಯ ಒಳಗಿರಲಿ ಅಥವಾ ಹೊರಗಿರಲಿ ತಮ್ಮೊಂದಿಗೆ ತಾಯ್ತನವನ್ನು ಅರಿತೋ, ಅರಿಯದೆಯೋ ಜತನವಾಗಿ ಕಾಪಿಟ್ಟುಕೊಂಡಿರುತ್ತಾರೆ. ಅದನ್ನು ಹೆಂಗರುಳು ಎಂದು ಕೂಡ ಕರೆಯಲಾಗುತ್ತದೆ. ಕೆಲವು ಬಾರಿ ಈ ಹೆಂಗರುಳನ್ನು ಗಂಡಸು ಒಳಗೊಂಡಿದ್ದರೆ ಇನ್ನೂ ಕೆಲವು ಕಡೆ ಹೆಣ್ಣು ಗಂಡು ಹೃದಯೀ ಆಗಿರುತ್ತಾಳೆ.

ಭಾಗೀರಥಿಯ ‘ಕೆರೆಗೆ ಹಾರ’ ಕೇಳುಗರ ಮನಸ್ಸಿನಲ್ಲಿ ನೋವಿನ ಅಲೆಯನ್ನು, ಎಂತಹವರವಲ್ಲೂ ಸಂಕಟವನ್ನು ಉಕ್ಕಿಸುವ ಕಾವ್ಯ. ಹೊರನೋಟಕ್ಕೆ ಯಾರೂ ಇಲ್ಲಿ ಕೆಟ್ಟವರಲ್ಲ. ಸಂದರ್ಭದ ಕೈವಶರಾಗಿಯೇ ವರ್ತಿಸಿದರೂ ಅಸಹಾಯಕ ಹೆಣ್ಣು ಮಗಳೊಬ್ಬಳ ಏಕಾಂಗಿತನ, ಅನಾಥಪ್ರಜ್ಞೆ, ತನ್ನನ್ನು ರೂಪಿಸಿದ ವ್ಯವಸ್ಥೆಗೆ ತಿರುಗಿನಿಲ್ಲಲಾರದ ಪರಂಪರೆಯ ಭಾರ ತಣ್ಣಗೆ ಕೊರೆಯಲಾಂಭಿಸುತ್ತದೆ. ನಮ್ಮ ಪುರಾತನ ಕಾಲದಲ್ಲಿ ಜನರ ಉಪಕಾರಕ್ಕಾಗಿ ಕೆರೆಕಟ್ಟೆಗಳನ್ನು, ಕೋಟೆಗಳನ್ನು ಕಟ್ಟಿಸಲಾಗುತ್ತಿತ್ತು. ಕೆರೆಗೆ ಹಾರದಲ್ಲಿ ಕಥೆಯೊಂದು ಬರುತ್ತದೆ. ಕಲ್ಲನಕೇರಿಯ ಮಲ್ಲನಗೌಡ ಕೆರೆಯೊಂದನ್ನು ಕಟ್ಟಿಸಿದ್ದಾನೆ. ನೀರಿನ ಸೆಲೆಯೊಡೆಯುತ್ತಿಲ್ಲ. ಈ ಕೆರೆಯೊಳಗೆ ಜೋಯಿಸರನ್ನು ಕರೆಸಿ, ಹೊತ್ತಿಗೆಯನ್ನು ತೆಗೆಸಿ ಜೋತಿಷ್ಯ ಕೇಳಲಾಗಿ, ನಿನ್ನ ಹಿರಿಯ ಸೊಸೆ ಮಲ್ಲವ್ವನನ್ನು ಬಲಿಕೊಡು ಆಗ ಕೆರೆಗೆ ನೀರು ಬೀಳುತ್ತದೆ ಎಂದು ಹೇಳಲಾಗುತ್ತದೆ. ಆದರೆ ಮಲ್ಲನಗೌಡ ತನ್ನ ಕುಟುಂಬ ಕಾಪಾಡಬಲ್ಲ ಹಿರಿಯ ಸೊಸೆ ಮಲ್ಲವ್ವನ ಬಲಿ ಕೊಡಲಾಗದೆ, ಎಲ್ಲರಿಗಿಂತ ಕಿರಿಯವಳಾದ ಸೊಸೆ ಭಾಗೀರಥಿಯನ್ನು ಬಲಿಕೊಡುವ ತೀರ್ಮಾನ ತೆಗೆದುಕೊಳ್ಳುತ್ತಾನೆ. ಭಾಗೀರಥಿಯ ಗಂಡ ಮಾದೇವ ದಂಡಿನಲ್ಲಿದ್ದಾನೆ. ಮೊದಲೇ ಏಕಾಂಗಿಯಾಗಿರುವ ಹೆಣ್ಣುಮಗಳು ಪ್ರತಿಭಟನೆಯ ಸೊಲ್ಲು ಎತ್ತಲಾರಳು. ಒಂದು ವೇಳೆ ಪ್ರತಿಭಟಿಸಿದರೂ ಅದನ್ನು ಒಪ್ಪುವವರಾದರೂ ಯಾರು. ಬಾಲ್ಯದಿಂದಲೂ ತೌರಿನವರಾಗಲೀ, ಗಂಡನ ಮನೆಯವರಾಗಲೀ ‘ಇಟ್ಟಾಂಗ ಇರಬೇಕು’ ಎಂಬ ಸೊಲ್ಲಿಗೆ ಅನುಗುಣವಾಗಿ ಬೆಳೆದ ಹೆಣ್ಣು ಮಗಳು ಏನು ಮಾಡಲು ಸಾಧ್ಯ. ಹುಟ್ಟಿದ ಮನೆಗೂ, ಮೆಟ್ಟಿದ ಮನೆಗೂ ಹೂವ ತರುವನಲ್ಲದೆ, ಹುಲ್ಲ ತಾರೆನು ಎಂಬ ಮಾತಿಗೆ ತಕ್ಕಂತೆ ಬೆಳೆದ ಭಾಗೀರಥಿಯ ಮುಂದೆ ಯಾವ ಆಯ್ಕೆಗಳೂ ಇಲ್ಲ.

ಯಾತನೆಯಿಂದ ಜೀವವನ್ನು ತಣಿಸಿಕೊಳ್ಳಲು ಅತ್ತೆಯ ಒಪ್ಪಿಗೆ ಪಡೆದು ತವರಿನ ಕಡೆಗೆ ನಡೆಯುತ್ತಾಳೆ. ಅಲ್ಲಿ ಎದುರಾದ ತಂದೆ, ತಾಯಿ, ಅಕ್ಕ, ಗೆಳತಿ ಕೇಳುವ ಒಂದೇ ಪ್ರಶ್ನೆಯೆಂದರೆ ‘ಎಂದಿಲ್ಲದ ಭಾಗೀರಥಿ ಇಂದ್ಯಾಕ ಬಂದೆವ್ವ’ ಎಂಬುದಾಗಿತ್ತು. ಗಂಡನ ಜೊತೆಯಲ್ಲಿಯೇ ತವರಿಗೆ ಬರಬೇಕು, ಒಂಟಿಯಾಗಿ ಬರಬಾರದು– ಈ ರೀತಿಯ ನಿರೀಕ್ಷೆಗಳು ಸಹ ಇಲ್ಲಿ ಕೆಲಸ ಮಾಡುತ್ತವೆ. ಎಲ್ಲಿಯೂ ತಾನು ‘ಕೆರೆಗೆ ಹಾರ’ ಆಗುವ ಸಂಗತಿ ಹೇಳದಿದ್ದರೂ ಅವರೆಲ್ಲರೂ ಅರಿತು ಅರಿಯದಂತಿದ್ದಾರೆ. ಅವರ ನಿರೀಕ್ಷೆ ಸೊಸೆಯಾಗಿ ತನ್ನ ಕರ್ತವ್ಯದಲ್ಲಿ ಗೆಲ್ಲಲೇಬೇಕು ಎಂಬುದಾಗಿದೆ. ಸರ್ರನೆ ತವರಿಗೆ ಬಂದು ಬರ್ರನೆ ಗಂಡನ ಮನೆಗೆ ಹಿಂತಿರುಗಿ ಬಂದ ಭಾಗೀರಥಿಯ ಮನಸ್ಸು ದುಃಖದಿಂದ ತುಂಬಿಹೋಗಿದೆ. ಈ ನೋವನ್ನು ಅರಿಯಲಾರದಷ್ಟು ತೀವ್ರ ಜಡತ್ವದ ವಾತಾವರಣ ಗಂಡನ ಮನೆಯಲ್ಲಿದೆ.

ಸಿಂಗಾರಗೊಂಡ ಭಾಗೀರಥಿ ಹರಕೆಯ ಕುರಿಯಂತೆ ಮುಂದೆ, ಮುಂದೆ ಸಾಗಿದರೆ ಹಿಂದೆ ಕುಟುಂಬದವರು ನಡೆದು ಬರುತ್ತಾರೆ. ಎಲ್ಲರೂ ಗಂಗೆಯ ಪೂಜೆ ಮಾಡಿ, ಬಂದು ಮನೆಗೆ ಮರಳುವಾಗ ಬೇಕೆಂದೇ ಚಿನ್ನದ ಬಟ್ಟಲನ್ನು ಕೆರೆಯಲ್ಲಿ ಮರೆತು ಬರುತ್ತಾರೆ. ಅದನ್ನು ತರಲು ಭಾಗೀರಥಿಯೇ ಹೋಗಬೇಕು. ಇದು ಅವಳು ಕೆರೆಯಲ್ಲಿ ಬಯಲಾಗುವ ಸಂದರ್ಭ. ತನ್ನೆಡೆಗಡ ಬಂದ ಭಾಗೀರಥಿಯನ್ನು ಪಾದದಿಂದ ಶಿರದವರೆಗೆ ಆವರಿಸಿ ಗಂಗೆ ತನ್ನೊಳಗೆ ಸೆಳೆದುಕೊಳ್ಳುತ್ತಾಳೆ.

ಮಾದೇವ ಧಾವಿಸಿ ತನ್ನ ಮನೆಗೆ ಬರುತ್ತಾನೆ. ರಾತ್ರಿಯ ಕನಸಿನಲ್ಲಿ ಕಂಡ ಅಪಶಕುನದ ಕನಸೊಂದು ದಂಡನ್ನು ಬಿಟ್ಟು ಮನೆಗೆ ಧಾವಿಸಿ ಬರುವಂತೆ ಮಾಡುತ್ತದೆ. ಭಾಗೀರಥಿಯ ಗೆಳತಿಯು ‘ನಿನ್ನಪ್ಪ, ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತೆ’ ಎಂಬ ಕಟುಸತ್ಯ ನುಡಿಯುತ್ತಾಳೆ. ಹೆಂಡತಿಯ ಪ್ರೀತಿಗೆ ಮನಸೋತಿದ್ದ ಮಾದೇವ ಅದೇ ಕೆರೆಯಲ್ಲೇ ಆತ್ಮಾಹುತಿ ಮಾಡಿಕೊಳ್ಳುತ್ತಾನೆ. ಹಾರಕ್ಕೊಂದು ಪ್ರತಿಹಾರ, ಬಲಿಗೊಂದು ಪ್ರತಿಬಲಿ ಎಂಬ ದುರಂತ ಕಥೆಯಿದು. ಒಂದು ಕಡೆ ತನ್ನನ್ನು ಬಲಿಕೊಟ್ಟುಕೊಂಡ ಮುಗ್ಧ ಹೆಣ್ಣು, ಇನ್ನೊಂದು ಕಡೆ ಹೆಂಡತಿಗಾಗಿ ಬಲಿಕೊಟ್ಟುಕೊಂಡ ಗಂಡಿನ ಕತೆಯಾದರೂ ಇದರೊಳಗಿನ ಯಾತನೆ ಕೇಳುವವರಿಗೆ ತಟ್ಟದೆ ಬಿಡದು. ಇದೇ ರೀತಿಯ ಗಂಡನ ಮನೆಯಿಂದ ತವರಿನ ಮನೆಯಿಂದ ಪರಿತ್ಯಕ್ತಳಾಗಿ ಉತ್ತರದೇವಿಯು ಉತ್ತರೆ ಮಳೆಯಾಗಿ ಬೀದಿಯಲ್ಲಿ ಹರಿದ ಕಥನ ಜನಪದ ಸಾಹಿತ್ಯದಲ್ಲಿ ಸಿಗುತ್ತದೆ. ಮಳೆ, ಜನ ಸಂಸ್ಕೃತಿಯ ‘ಹಿಡಿಯಲಾರದ ಪೊರೆಯಲಾಗದ’ ಸಂಕೇತವಾಗಿಯೇ ಕುಟುಂಬದಿಂದ ಪರಿತ್ಯಕ್ತಳಾದ ಹೆಣ್ಣು ಇಲ್ಲಿ ತೋರುತ್ತಾಳೆ.

■ **ಅಮೃತಮತಿ**

## ಮಾತೇ ಮುತ್ತು

◆ ಆತ್ಮವಿಶ್ವಾಸ ನಿಧಾನವಾಗಿ ಬೆಳೆಯುವ ಗಿಡ.
—ವಿಲಿಯಂ ಪಿಟ್

◆ ಜ್ಞಾನಿಗೆ ಕತ್ತಲೆ ಇಲ್ಲ. ಅಜಾತಂಗೆ ಹೊಲೆ ಇಲ್ಲ.
—ಚೆನ್ನಬಸವೇಶ್ವರ

◆ ಹುಲಿ ತನ್ನ ಹುಲಿತನದ ಬಗ್ಗೆ ಚೀರಿಕೊಳ್ಳಬೇಕಿಲ್ಲ.
—ಡಾ.ಬಿ.ಆರ್. ಅಂಬೇಡ್ಕರ್

◆ ಪ್ರೇಮ ಎಂದರೆ ತನ್ನಲ್ಲಿ ಇನ್ನೊಬ್ಬರನ್ನೂ ಇನ್ನೊಬ್ಬರಲ್ಲಿ ತನ್ನನ್ನೂ ಕಾಣುವ ಪ್ರಯತ್ನ.
—ಗೋಪಾಲಕೃಷ್ಣ ಅಡಿಗ

◆ ದಂಡನೆ ಮಾಡುವುದು ಯಾವಾಗಲೂ ಒಳ್ಳೆಯದಲ್ಲ. ಅದು ಸೌಹಾರ್ದವನ್ನು ಕೆಡಿಸುತ್ತದೆ. ದ್ವೇಷವನ್ನು ಬೆಳೆಸುತ್ತದೆ.
—ಎಂ.ಆರ್.ಶ್ರೀ

◆ ಕೆಟ್ಟದ್ದರಿಂದ ಕೆಲವರು ಮುಂದೆ ಬರುತ್ತಾರೆ. ಒಳ್ಳೆಯದರಿಂದ ಕೆಲವರು ಹಿಂದೆ ಬೀಳುತ್ತಾರೆ.
—ಷೇಕ್ಸ್‌ಪಿಯರ್

◆ ಈ ಜೀವನಕ್ಕೆ ಒಂದು ಅರ್ಥವಿದ್ದರೆ, ಅದು ಮಾನವನ ವಿಚಾರಶೀಲತೆಯ ಪರಿಣಾಮದಿಂದ ಮಾತ್ರ.
—ಗಾಂಧೀಜಿ